# "ಇವಳು ಯಾರು ಬಲ್ಲೆಯೇನು..."

ನಾನೀಗ ಅಜ್ಞಾತವಾಸಿ. ರಾಜಾಗ್ರಹಕ್ಕೆ ಹೆದರಿ ತಲೆಮರೆಸಿಕೊಂಡು ಪರದೇಶಿಯಾಗಿ, ಜನಪರ ಚಳುವಳಿಯ ರಹಸ್ಯ ರಾಯಭಾರಿಯಾಗಿ ಮಲೆಯಾಳ ದೇಶದ ಈ ಕುಗ್ರಾಮಕ್ಕೆ ಬಂದಿಳಿದಿದ್ದೇನೆ, ನಮ್ಮ ಚಳುವಳಿಯ ಈ ಭಾಗದ ಮುಖ್ಯಸ್ಥರಾದ ರಾಧೇಯರ ಮನೆಗೆ. ಘನಕಾಡಿನ ನಡುವಿನ ಈ ಗ್ರಾಮದ ಜನತೆಗೆ ನಾನು ಮೂಡಣದೇಶದಲ್ಲಿರುವ ರಾಧೇಯರ ದೂರ ಸಂಬಂಧಿ ಅಕ್ಕನ ಮಗ. ಹುಟ್ಟಿನಿಂದ ಇದ್ದ ಜಾಡ್ಯದ ಔಷಧೋಪಚಾರಕ್ಕಾಗಿ ಇಲ್ಲಿಗೆ ಬಂದಿದ್ದೇನೆ! (ನನ್ನನ್ನು ನೋಡಿದರೆ ಯಾರಾದರೂ ಜನುಮದಿಂದ ಜಡ್ಡು ಹಿಡಿದವನು ಅನ್ನುತ್ತಾರೆಯೇ? ಹ್ಹ!) ಹೆಣ್ಣುಮಕ್ಕಳೇ ತುಂಬಿರುವ ಚೌಕದ ಮನೆಯಲ್ಲಿ ನನ್ನದೊಂದು ಸಣ್ಣ ಕೊಠಡಿ. ಜಡ್ಡು(!) ಹಿಡಿದ ನಾನು ಹೊರಗೆಲ್ಲೂ ಹೋಗುವಂತಿಲ್ಲ.

**ಇವಳು ಯಾರು ಬಲ್ಲೆಯೇನು । ಇವಳ ಹೆಸರ ಹೇಳಲೇನು ।**
**ಇವಳ ದನಿಗೆ ತಿರುಗಲೇನು । ಇವಳು ಏತಕೋ ಬಂದು ನನ್ನ ಸೆಳೆದಳು ॥**

ಇವಳು ಕುಸುಮಬಾಲಾ, ರಾಧೇಯರ ಹಿರಿಮಗಳು. ಈಗ... ನನ್ನ ಮನಸಿನ ನೀಹಾರಿಕೆ. ಮಾತು ಕಡಿಮೆ, ಮೌನ ಸಂವಾದ ಜಾಸ್ತಿ. ಇವಳನ್ನು ನೋಡುವ ಮುಂಚೆ ಯಾರಾದರೂ ಮೌನದಲ್ಲೂ ಸಂಭಾಷಿಸಬಹುದು ಅಂದರೆ ನಾನು ನಕ್ಕುಬಿಡುತಿದ್ದೆನೇನೋ? ಅಂದ ಹಾಗೆ, ನಾನು ಇಲ್ಲಿಗೆ ಬರುವುದಕ್ಕೂ ಮುನ್ನ ಮನಸಾರೆ ನಕ್ಕಿದ್ದು ನನಗೆ ನೆನಪಿಲ್ಲ. ನಾನೊಬ್ಬನೇ ಏಕೆ? ಅರಾಜಕತೆ ತುಂಬಿದ ನಮ್ಮ ರಾಜ್ಯದಲ್ಲಿ ನಗು ಬಹಳ ತುಟ್ಟಿ, ಸಂತೋಷ ಅದಕ್ಕೂ ದುಬಾರಿ.

**ಅಡಿಯ ಮುಟ್ಟ ನೀಳ ಜಡೆ । ಮುಡಿಯ ತುಂಬ ಹೂವು ಹೆಡೆ ।**
**ಇವಳು ಅಡಿಯನಿಟ್ಟ ಕಡೆ । ಹೆಜ್ಜೆಹೆಜ್ಜೆಗೆ ಒಂದು ದೊಡ್ಡ ಮಲ್ಲಿಗೆ ॥**

ಹೊರಗಡೆ ಮುಸಲಧಾರೆಯೆರೆಯುತಿರುವ ಕಾರ್ಮೋಡವೂ ಇವಳ ಹೊರೆಗೂದಲ ನೋಡಿ ನಾಚಿಕೊಳ್ಳಬೇಕು. ರಾತ್ರಿಯೆಲ್ಲ ಚಿಂತಿಸುತ್ತ ಓಲೆಗಳ ಬರೆಯುತ್ತ, ಬಂದವುಗಳಿಗೆ ಉತ್ತರಿಸುತ್ತ ಮೂರನೇ ಪ್ರಹರಕ್ಕೆ ಮಲಗಿದವನು ಸ್ವಲ್ಪ ತಡವಾಗಿಯೇ ಏಳುವುದು. ಅಷ್ಟು ಹೊತ್ತಿಗಾಗಲೇ ಮಿಂದು ತನ್ನ ಹೊರೆಗೂದಲ ಹೆಣೆದುಕೊಂಡು ತುದಿಗೊಂದು ಕುಚ್ಚನ್ನೂ ಸಿಕ್ಕಿಸಿಕೊಂಡು, ಅದರ ಮೇಲೆ ಮಳೆಯಲ್ಲೇ ಮೊಗ್ಗಿನಿಂದ ಹೂವಾಗಿ ಬಸವಳಿದ ಮಲ್ಲಿಗೆಯ ಮಾಲೆಯ ದಂಡೆಯನ್ನೇರಿಸಿಕೊಂಡು ನನ್ನ ಕೋಣೆಯ ಬಾಗಿಲಲಿ ಇವಳು ಪ್ರತ್ಯಕ್ಷ! ಅವಳು ಹೀಗೆ ಬಂದು ನಿಂತರೆ ನನ್ನ ಕನಸಿನಿಂದಲೇ ಇಳಿದುಬಂದಳೇ ಅಥವಾ ಈ ನನಸಿನಿಂದ ನನ್ನ ಸವಿಗನಸಿನೊಳಕ್ಕೆ ಏರಿದಳೇ ಅನ್ನುವ ಗೊಂದಲ ನನಗೆ. ಅವಳ ತಿದ್ದಿ ತೀಡಿದ ಮೀನಗಣ್ಣಿನ ಕಾಡಿಗೆ ಮಾತನಾಡುತ್ತದೆ, "ಮೀಯಲಿಕ್ಕೆ ಎಲ್ಲವೂ ಅಣಿಯಾಗಿದೆ". ಅವಳು ತಿರುಗಿ ಹೋಗುವಾಗ ಹರಿದುಹೋಗಬಾರದೆಂದು ಹಗುರವಾಗಿ ಕಟ್ಟಿದ, ಮಳೆಯಲ್ಲಿ ನೆನೆದ ಮಲ್ಲಿಗೆಯ ದಂಡೆಯ ಹೂವುಗಳೆಲ್ಲ ಅವಳು ಹೆಜ್ಜೆಯಿಟ್ಟೊಡೆಲ್ಲ ಚೆಲ್ಲಿಕೊಳ್ಳುತ್ತವೆ ಮತ್ತು ಜಗುಲಿಯ ತುಂಬೆಲ್ಲ ಹರಡಿದ ಅವಳ ಅಗೋಚರ ಹೆಜ್ಜೆಗಳನ್ನು ಚುಂಬಿಸುತ್ತವೆ!

**ಅಂಗಾಲಿನ ಸಂಜೆಗೆಂಪು । ಕಾಲಂದುಗೆ ಗೆಜ್ಜೆಯಿಂಪು ।**
**ಮೋಹದ ಮಲ್ಲಿಗೆಯ ಕಂಪು ಕರೆದುದೆನ್ನನು । ನಾನು ಹಿಡಿಯ ಹೋದೆನು ॥**

ಉಪಾಹಾರಕ್ಕೆ ರಾಧೇಯರ ಕೊನೆಯ ಮಗಳು, ಅರಳು ಹುರಿವ ಬಾಲಂಗೋಚಿ–ಸಮುದಿತಾಳ ಉಪಚಾರ. ಅಡುಗೆ ಮನೆಯ ಬಾಗಿಲ ಹಿಂದೆ ನಿಂತು ಮಿಂದು ಉತ್ತರೀಯ ಸುತ್ತಿಕೊಂಡು ಪದ್ಮಾಸನ ಹಾಕಿ ಕುಳಿತ ನನ್ನನ್ನೇ ನೋಡುವ ಜೋಡಿ ಕಣ್ಣುಗಳು. ಉಪಾಹಾರದ ನಂತರ ಸಂಜೆಯವರೆಗೆ ಮಾರುವೇಷದಲ್ಲಿ ಬರುತ್ತಲೇ ಇರುವ ಸ್ನೇಹಿತರೊಡನೆ ಮಾತು, ಗುಪ್ತಾಲೋಚನೆ, ಬರಹ. ರಾಧೇಯರ ಮನೆಯೊಳಗೆ ನಮ್ಮನ್ನು ಬಿಟ್ಟರೆ ಯಾರೂ ಇಲ್ಲವೇನೋ ಎನ್ನುವಷ್ಟು ಮೌನ. ಹೆಣ್ಣುಗಳೆಲ್ಲ ಕೋಣೆಗಳಲ್ಲಿ ಚೆನ್ನಮಣೆಯೋ, ಪಗಡೆಯೋ ಆಡುತ್ತಿರುತ್ತವೆ. ಹೊರಗಡೆ ಯಾವ ಉತ್ಪಾತಕ್ಕೋ ಜಲಪ್ರಳಯಕ್ಕೋ ಎಂಬಂತೆ ಸುರಿಯುತ್ತಿರುವ ಮಳೆ. ದೊಡ್ಡ ಮನೆಯ ಆ ಮೂಲೆಯಂಚಿನ ಕೋಣೆಯಲ್ಲಿ ಹಗುರವಾದ ವೀಣಾನಾದ, 'ಭಾವಯಾಮಿ ಗೋಪಾಲ ಬಾಲಂ..." ಇಳೀ ಸಂಜೆಯಾಗುತ್ತಲೂ ಅವಳ ಕಾಲಂದುಗೆಗಳು ಜಗುಲಿಯ ಹಾಸುಗಲ್ಲ ಮೇಲೆ ಶಬ್ದ ಮಾಡುತ್ತವೆ. ಮುಂಜಾವಿನಲಿ ಮುಡಿದಿದ್ದ ಮಲ್ಲಿಗೆಯ ದಂಡೆ ಅವಳ ಶ್ರೀಗಂಧದ–ದೇಹದ ಸುಖೋಷ್ಣಕ್ಕೆ ಬಾಡಿದಂತಾಗಿ ಎಲ್ಲೆಡೆ ಕಂಪು ಹರಿಸುತ್ತದೆ. ಒಳಜಗುಲಿಯ ಕಂಬಕ್ಕೊರಗಿ, ಮಳೆಯೊಳಕ್ಕೆ ಕೈಚಾಚಿ ನಿಂತವನು ಅತ್ತ ನೋಡಿ ನಿಟ್ಟುಸಿರಾಗುತ್ತೇನೆ, ಅವಳ ಕೈಯಲ್ಲಿ ಹಾಲಿನ ದೊಡ್ಡದೊಂದು ಮೊಗೆ. ಹಾಲು ಕುಡಿದು, ನನ್ನ ಕೋಣೆಗೇ ತಾಕಿಕೊಂಡಿರುವ ಒಳ ಹಜಾರದಲ್ಲಿ ನಂದಾದೀಪದ ಮುಂದೆ ಸಾಮು ತೆಗೆಯುತ್ತೇನೆ, ಉಠಾಬೈಸ್ ಹೊಡೆಯುತ್ತೇನೆ. ಈ ಎಲ್ಲ ಸಂಕಷ್ಟಗಳನ್ನು ಎದುರಿಸಲು ಮನಸಿನೊಂದಿಗೆ ದೇಹವೂ ಹೆದೆಯೇರಿದ ಬಿಲ್ಲಿನಂತಿರಬೇಕು! ಹಜಾರದ ಒಳಕಿಟಕಿಗಳಲ್ಲಿ ಕದ್ದು ಮುಚ್ಚಿ ನೋಡುವ ಪುಟ್ಟ ಪುಟ್ಟ ಹಣತೆಗಣ್ಣುಗಳು, ಅತ್ತ ನೋಡಿದೊಡನೆಯೇ ನಗುವ ಕಲರವದೊಂದಿಗೆ ಓಡಿಬಿಡುವ ಆ ಹೆಣ್ಣುಮಕ್ಕಳ ಪದತಾಡನದಿಂದ ಜಗುಲಿಯ ಎದೆಯ ಮೇಲೆ ಧೀಂತನನ!

**ಬಂಗಾರದ ಬೆಳಕಿನೊಳಗೆ । ಮುಂಗಾರಿನ ಮಿಂಚು ಬೆಳಗೆ ।**

**ಇಳೆಗಿಳಿದಿಹ ಮೋಡದೊಳಗೆ । ಮೆರೆಯುತಿದ್ದಳು, ನನ್ನ ಕರೆಯುತಿದ್ದಳು ॥**

ಇವತ್ತು ಸೋಮೇಶ್ವರದ ಸಮುದ್ರ ತೀರಕ್ಕೆ ಹೋಗಿದ್ದೆವು. ಅಲ್ಲಿಗೆ ಕೇಶವಾರ್ಯರು ಬರುವವರಿದ್ದರು, ಅವರೊಡನೆ ರಹಸ್ಯ ಸಂವಾದ ಏರ್ಪಾಟಾಗಿತ್ತು. ಯಾರಿಗೂ ಸಂಶಯ ಬಾರದಂತೆ ರಾಧೇಯರು ತಮ್ಮ ಮನೆಯವರನ್ನೆಲ್ಲ ಗ್ರಾಮದಿಂದ ಬರೀ ಇಪ್ಪತ್ತು ಮೈಲಿಯಿದ್ದ ಸೋಮೇಶ್ವರನ ದರ್ಶನಕ್ಕೆಂಬಂತೆ ಹೊರಡಿಸಿಕೊಂಡು ಬಂದಿದ್ದರು. ಹುಟ್ಟಿದಾಗಿನಿಂದ ಸಮುದ್ರವನ್ನೇ ನೋಡದ ನನಗೆ ಅದನ್ನು ಕಂಡು ಹೇಳರಿಯದ ಸಂತೋಷವೂ, ಭಯಾಶ್ಚರ್ಯಗಳೂ ಉಂಟಾದವು. ಆಗಸದಲ್ಲಿ ಎದೆ ಹರಿದುಕೊಂಡು ಭೋರನೇ ಸುರಿಯುತ್ತಿರುವ ಮೋಡಗಳು, ಕೆಳಗೆ ಆ ಅಬ್ಬರದ ತಾಳಕ್ಕೆ ಕುಣಿದು ಬೊಬ್ಬಿರಿಯುತ್ತಿರುವ ಸಮುದ್ರ, ದಿಗಂತ ಕಾಣದಂತೆ ಮುಚ್ಚಿಕೊಂಡ ಮಳೆಯ ಪರದೆ, ಹಾರುವ ಮಿಂಚು, ಹರಿಯುವ ಸಿಡಿಲು, ಢಮರುಗದಂತೆ ಗುಡುಗುಡಿಸುವ ಗುಡುಗು ಎಲ್ಲವೂ ಸೇರಿ ನನಗೆ ಆ ಪ್ರಕೃತಿ ಮಹಾರುದ್ರನ ಶಿವತಾಂಡವಕ್ಕೆ ಸುವಿಶಾಲ ದೈವವೇದಿಕೆಯೆನಿಸಿತು. ಸಂಜೆಗೆ ಸ್ವಲ್ಪ ಮಳೆಯ ಆರ್ಭಟ ಕಡಿಮೆಯಾದ ಸಮಯಕ್ಕೆ ಬಂದರು ಕೇಶವಾರ್ಯರು. ನಾವ್ಮೂವರೂ ಕುಣಿವ ಅಲೆಗಳಗುಂಟ ನಡೆದುಕೊಂಡು ಜಾಗರೂಕರಾಗಿದ್ದುಕೊಂಡೇ ಸಂವಾದಗೈದೆವು. ವಾಪಸ್ಸು ಸೋಮೇಶ್ವರದ ಬಂಡೆಯ ಬಳಿ ಬರುವಷ್ಟರಲ್ಲಿ ಎಲ್ಲೋ ಅಪ್ಪಿ–ತಪ್ಪಿ ಸೀಳುಬಿಟ್ಟ ಮೋಡದಿಂದ  ಹೊಂಬೆಳಕ ಹಾಳೆಯೊಂದು ಜಾರಿ ಮರಳಿನುದ್ದಕ್ಕೂ ಬಿದ್ದಿತ್ತು. ಆ ಹೊಂಬೆಳಕ ಹಾಳೆಯ ಮೇಲೆ ಗುಂಪುಗಟ್ಟಿ ನಿಂತ ಸೋದರಿಯರ ನಡುವೆ ಹಾಡುತ್ತಿದ್ದ ಹಾಡಿಗೆ ಜೀವನರ್ತನಗೈಯ್ಯುತ್ತಿದ್ದಳು ಕುಸುಮಬಾಲೆ, ಮುಂಗಾರಿನ ಮಳೆಮೋಡಗಳ ಕಂಡು ಹರುಷದಿಂದ ಗರಿಗೆದರಿ ನರ್ತಿಸುವ ಮಯೂರದಂತೆ! ಅವಳ ಕೆನ್ನೆ ಕೆಂಪೇರಿದ್ದು ಸಂಜೆಗೆಂಪಿನಿಂದಲೋ, ಅಥವಾ ನಾನು ನೋಡಿದುದರಿಂದಲೋ? ನನ್ನೆದೆ ಭಾರವಾಗಿ, ಉಸಿರು ಸಿಕ್ಕಿಕೊಂಡು, ಹೃದಯ ಚಡಪಡಿಸಿತು. ನಾನು ತುಟಿಯಂಚಿನಲ್ಲಿ ನಸುನಗುವನ್ನಿಟ್ಟುಕೊಂಡು ಹೊಳಪುಕಂಗಳಲ್ಲಿ ಅವಳನ್ನೇ ದಿಟ್ಟಿಸುತ್ತ, ನಿಟ್ಟುಸಿರು ಬಿಟ್ಟ ಕಾರಣ ರಾಧೇಯರಿಗೂ ಕೇಶವಾರ್ಯರಿಗೂ ಅರ್ಥವಾಯಿತು. ಕೇಶವಾರ್ಯರು ರಾಧೇಯರ ಮುಖನೋಡಿದರು. ರಾಧೇಯರ ಕಣ್ಣುಗಳಲ್ಲಿ ಸಂತೋಷ, ಚಿಂತೆ, ಗೊಂದಲ ಎಲ್ಲವೂ...

**ಇವಳು ಯಾರು ಬಲ್ಲೆಯೇನು । ಇವಳ ಹೆಸರ ಹೇಳಲೇನು ।**
**ಇವಳ ದನಿಗೆ ತಿರುಗಲೇನು । ಇವಳು ಏತಕೋ ಬಂದು ನನ್ನ ಸೆಳೆದಳು ॥**

ಕೇಶವಾರ್ಯರು ತಂದ ವಿಚಾರ ಚಿಂತಾಜನಕವೇ ಆಗಿದೆ. ನನ್ನ ಅಪ್ಪಾಜಿ, ಅಬ್ಬೆ, ಅಣ್ಣ ಮತ್ತು ಕೆಲವು ಮಿತ್ರರನ್ನೆಲ್ಲ ಕಾರಾಗೃಹದಲ್ಲಿಡಲಾಗಿದೆಯಂತೆ. ನಾನು ಹೋಗಿ ಶರಣಾದರೆ ಅವರನ್ನೆಲ್ಲ ಬಂಧಮುಕ್ತರನ್ನಾಗಿಸಿ ನನಗೆ ಜೀವದಾನವೀಯುವುದಾಗಿಯೂ ಮತ್ತು ಈ ವಿದ್ರೋಹಕ್ಕೆ ಕಾರಣಗಳ ಕುರಿತು ನನ್ನೊಡನೆ ಮರ್ಯಾದಾಪೂರ್ವಕವಾಗಿ ಮಾತುಕತೆ ನಡೆಸುವುದಾಗಿಯೂ ಅರಸರು ಸುತ್ತೋಲೆ ಹೊರಡಿಸಿದ್ದಾರಂತೆ. ಎಷ್ಟು ಸತ್ಯವೋ, ಎಷ್ಟು ಮಿಥ್ಯವೋ? ಬೇಹುಗಾರರು ಈ ಮಲೆಯಾಳದೇಶದ ಸರಹದ್ದನ್ನೂ ತಲುಪಿದ್ದಾರಂತೆ. ನಾಳೆ ಮುಂಜಾವಕ್ಕೇ ಹೊರಡಬೇಕು ನಾನು. ಈಗ ಹೊರಟುಹೋದರೆ ನನ್ನೀ ನೀಹಾರಿಕೆಯನ್ನು ಮತ್ತೆ ನೋಡುತ್ತೇನೆಯೇ ನಾನು? ಅವಳಿಗೆ ಹೇಗಾದರೂ ಓಲೆಯೊಂದನ್ನು ಬರೆದಿಡಬೇಕಲ್ಲ. ಏನನ್ನು ಬರೆಯಲಿ? ಹೇಗೆ ಬರೆಯಲಿ? ಯಾರ ಬಳಿ ಕೊಡಲಿ? ಇಡೀ ಗ್ರಾಮ ಮಲಗಿರುವಾಗ ಸದ್ದಾಗದಂತೆ ಕೇಶವಾರ್ಯರ ಸಹಚಾರಿಗಳು ತರುವ ಕುದುರೆಯೇರಿ ಹೊರಡಬೇಕು ನಾನು, ಏನು ಮಾಡಲಿ? 'ಯಾವತ್ತೂ ನನ್ನ ಭವಿತವ್ಯದ ಬಗ್ಗೆ ಯೋಚಿಸದ ನನಗಿಲ್ಲಿ ಸವಿಗನಸುಗಳ ಭಂಡಾರವೇ ಸಿಕ್ಕಿದೆ. ನನ್ನ ಮನದನ್ನೆ ನೀನು ಕುಸುಮ ಬಾಲೆ, ಮಗನ ಹೆಸರು ಸೋಮೇಶ, ಪುಟ್ಟ ಮಗಳು ಸೋಮದತ್ತೆ!' ಇಷ್ಟು ಬರೆದರೆ ಸಾಕಲ್ಲವೇ?

...ಆಗಲೇ ಹೊತ್ತು ಮೊದಲನೇ ಪ್ರಹರ ದಾಟಿತಿರಬೇಕು, ಮಲಗುವೆನೆಂದರೆ ನಿದ್ರೆ ಬರುತ್ತಿಲ್ಲ. ಹೃದಯ ಢವಢವಿಸುತ್ತಿದೆ. ನಾಳೆ ನನಗೆ ಏನು ಕಾದಿದೆಯೋ ಗೊತ್ತಿಲ್ಲ, ಇದೆಲ್ಲ ಯಾವ ಕುಟಿಲ ಯಂತ್ರದ ಭಾಗವೋ ಗೊತ್ತಿಲ್ಲ. ಹೆದರಿಕೆಯೆಂದರೇ ಏನೆಂದು ತಿಳಿದಿರದಿದ್ದ ನನಗೀಗ ಭಯವಾಗುತ್ತಿದೆ. ಜೀವಭಯವಲ್ಲ, ನನ್ನ ಕುಸುಮಬಾಲೆಯನ್ನು ಮತ್ತೆ ನೋಡಲಾರೆನೋ ಎಂಬ ಭಯ, ನನ್ನ ಮನದ ಮನೆಯ ಜಗುಲಿಯ ತುಂಬ ಚೆಲ್ಲಿದ ಅವಳ ಹೆಜ್ಜೆಗಳ ಹಿಂದಿನ ಮಲ್ಲಿಗೆಯ ಮೆರವಣಿಗೆ ಅನಂತಾನಂತಕ್ಕೂ ತಪ್ಪಿಹೋದೀತೇನೋ ಎಂಬ ದಿಗಿಲು. ದೇವಾನುದೇವತೆಗಳೇ ಏನಾಗಲಿದೆ ನನ್ನ ಪ್ರೇಮದ ಗತಿ?

ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.   shivu_ks@rediffmail.com**